**D**

SL. No. : G

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PR**
**UNREVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 26. 06. 2019 ] [ Date : 26. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದ ಪ್ರಥಮ ಗೃಹ ಮಂತ್ರಿ

   (A) ಸರದಾರ್ ವಲ್ಲಭಬಾಯಿ ಪಟೇಲ್

   (B) ಸುಭಾಷ್ ಚಂದ್ರ ಬೋಸ್

   (C) ಜವಾಹರಲಾಲ್ ನೆಹರೂ

   (D) ಬಾಬು ರಾಜೇಂದ್ರ ಪ್ರಸಾದ್

2. ಭಾರತ ಸರ್ಕಾರವು ರಾಜ್ಯ ಪುನರ್ ವಿಂಗಡಣಾ ಕಾಯ್ದೆಯನ್ನು ಜಾರಿಗೆ ತಂದ ವರ್ಷ

   (A) 1953 (B) 1955

   (C) 1956 (D) 1958

3. ಭಾರತವು ಹಲವಾರು ವ್ಯಾಪಾರದ ರಿಯಾಯಿತಿಗಳನ್ನು ನೇಪಾಳಕ್ಕೆ ನೀಡಿದೆ. ಏಕೆಂದರೆ ನೇಪಾಳವು

   (A) ಪರ್ವತಗಳಿಂದ ಆವೃತವಾದ ಮತ್ತು ಭೌಗೋಳಿಕವಾಗಿ ಸಮೀಪದಲ್ಲಿರುವುದರಿಂದ

   (B) ನಮ್ಮ ಬೃಹತ್ ನೆರೆ ರಾಷ್ಟ್ರವಾಗಿರುವುದರಿಂದ

   (C) ನಮ್ಮ ರಾಷ್ಟ್ರದ ಗೌರವ ಕಾಪಾಡಬೇಕಾಗಿರುವುದರಿಂದ

   (D) ಅದು ಬಲಿಷ್ಠ ರಾಷ್ಟ್ರವಾಗಿರುವುದರಿಂದ

4. ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ನೇರ ಪ್ರಕ್ರಿಯೆಯೇ

   (A) ಭಯಾನಕ ಪೈಪೋಟಿ (B) ಶಸ್ತ್ರಾಸ್ತ್ರ ಪೈಪೋಟಿ

   (C) ಶಸ್ತ್ರಾಸ್ತ್ರಗಳ ಸಂಗ್ರಹ (D) ನಿಶ್ಶಸ್ತ್ರೀಕರಣ

5. ಮಕ್ಕಳ ದುಡಿಮೆ ಎಂಬುದು ಸಾಮಾಜಿಕ ವ್ಯವಸೆಯ ಒಂದು ಗಂಭೀರ ಪಿಡುಗು ಏಕೆಂದರೆ ಅವರು

(A) ವಲಸೆಗಾರರಾಗಿರುತ್ತಾರೆ

(B) ತಂದೆ ತಾಯಿಯನ್ನು ಕಳೆದುಕೊಂಡಿರುತ್ತಾರೆ

(C) ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಗಾಗುತ್ತಾರೆ

(D) ಬಡವರಾಗಿರುತ್ತಾರೆ

6. ಭಾರತದ ವ್ಯವಸಾಯವನ್ನು ಮಾನ್‌ಸೂನ್ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯಲು ಕಾರಣ ಮಾನ್‌ಸೂನ್

(A) ರೈತರಿಗೆ ಯಾವಾಗಲೂ ಉತ್ತಮ ಬೆಳೆ ನೀಡುತ್ತದೆ

(B) ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತದೆ

(C) ತಮಿಳುನಾಡಿಗೆ ಹೆಚ್ಚು ಮಳೆ ತರುವುದಿಲ್ಲ

(D) ರೈತರು ಬೇರೆ ಬೇರೆ ಬೆಳೆ ಬೆಳೆಯಲು ಸಹಾಯ ಮಾಡುತ್ತದೆ

7. ಈ ನಕ್ಷೆಯಲ್ಲಿ ಗುರುತಿಸಿರುವ ಯೋಜನೆಗಳಿಗೆ ಕ್ರಮವಾಗಿ ಹೋಲಿಕೆಯಾಗುವುದು :




(A) 1 — ಭಾಕ್ರಾನಂಗಲ್, 2 — ನಾಗಾರ್ಜುನಸಾಗರ, 3 — ದಾಮೋದರ ಕಣಿವೆ

(B) 1 — ದಾಮೋದರ ಕಣಿವೆ, 2 — ಭಾಕ್ರಾನಂಗಲ್, 3 — ನಾಗಾರ್ಜುನಸಾಗರ

(C) 1 — ಭಾಕ್ರಾನಂಗಲ್, 2 — ದಾಮೋದರ ಕಣಿವೆ, 3 — ನಾಗಾರ್ಜುನಸಾಗರ

(D) 1 — ನಾಗಾರ್ಜುನಸಾಗರ, 2 — ಭಾಕ್ರಾನಂಗಲ್, 3 — ದಾಮೋದರ ಕಣಿವೆ

8. **A ಪಟ್ಟಿ**ಯಲ್ಲಿರುವ ಉದ್ಯಮಿಗಳು ಮತ್ತು **B ಪಟ್ಟಿ**ಯಲ್ಲಿ ಅವರಿಂದ ಸ್ಥಾಪಿತವಾದ ಉದ್ಯಮಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಅಜೀಮ್ ಪ್ರೇಮ್‌ಜಿ | (i) ರಿಲಯನ್ಸ್ ಸಂಸ್ಥೆ |
| (b) ನಾರಾಯಣಮೂರ್ತಿ | (ii) ಅಪೋಲೋ ವೈದ್ಯ ಶಾಲೆಗಳ ಗುಂಪು |
| (c) ಧೀರುಬಾಯಿ ಅಂಬಾನಿ | (iii) ವಿಪ್ರೋ ತಂತ್ರಜ್ಞಾನ |
| (d) ಡಾ. ಪ್ರತಾಪ ರೆಡ್ಡಿ | (iv) ಇನ್‌ಫೋಸಿಸ್ |

| | ***a*** | ***b*** | ***c*** | ***d*** |
|---|---|---|---|---|
| (A) | ii | i | iii | iv |
| (B) | iii | iv | i | ii |
| (C) | iv | iii | ii | i |
| (D) | i | ii | iv | iii |

9. ಸರ್ಕಾರದ ಆಯವ್ಯಯ ಪತ್ರದಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡುವ ಅಂಶ ಸರ್ಕಾರದ

(A) ತೆರಿಗೆ ಸಂಗ್ರಹಗಳು

(B) ಆದಾಯ ಮತ್ತು ವೆಚ್ಚಗಳು

(C) ಕಾನೂನು ನಿಯಮಗಳು

(D) ಅಭಿವೃದ್ಧಿ ಕಾರ್ಯಗಳು

10. ರಿಸರ್ವ್ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯುವರು ಏಕೆಂದರೆ ಇದು

(A) ಭಾರತದ ಎಲ್ಲಾ ಬ್ಯಾಂಕುಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ

(B) ಅಂಚೆ ಇಲಾಖೆಯ ಒಂದು ಭಾಗವಾಗಿದೆ

(C) ಖಾಸಗಿ ವಲಯದ ಬ್ಯಾಂಕ್ ಆಗಿದೆ

(D) ರೈತರಿಗೆ ಸಾಲ ನೀಡುತ್ತದೆ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

11. ಜನಸಾಮಾನ್ಯರ ಚರಿತ್ರೆಯನ್ನು ರಚಿಸುವುದು ಚರಿತ್ರೆಕಾರರಿಗೆ ಸವಾಲಾಗಿತ್ತು. ಏಕೆ ?

12. 1935 ರ ಶಾಸನವು ಭಾರತದ ಸಂವಿಧಾನಕ್ಕೆ ಆಧಾರವಾಗಿದೆ. ಹೇಗೆ ?

13. ಹಿಟ್ಲರನು ಜರ್ಮನಿಯಲ್ಲಿ ಯಹೂದಿಗಳ ಸಂಖ್ಯೆ ಕಡಿಮೆ ಮಾಡಲು ಕೈಗೊಂಡ ಕ್ರಮ ಯಾವುದು ?

14. ಪ್ರಗತಿ ಪಥದಲ್ಲಿ ಸ್ತ್ರೀಯರ ಸ್ಥಾನಮಾನವು ಹಿಂದುಳಿಯಲು ಕಾರಣವೇನು ?

15. ಭಾರತವು ವಿಶ್ವಸಂಸ್ಥೆಯೊಂದಿಗೆ ಹೇಗೆ ಸಹಕರಿಸುತ್ತಿದೆ ?

16. ಇತ್ತೀಚಿನ ದಿನಗಳಲ್ಲಿ ಅಸ್ಪೃಶ್ಯತಾ ಆಚರಣ ಕಡಿಮೆಯಾಗಲು ಕಾರಣವೇನು ?

17. ಇತ್ತೀಚಿಗೆ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿರಲು ಕಾರಣವೇನು ?

18. ಜೀವನಾಧಾರ ಬೇಸಾಯ ಎಂದರೇನು ?

19. ಭಾರತದಲ್ಲಿ ಅತೀ ಹೆಚ್ಚು ಭತ್ತ ಬೆಳೆಯುವ ರಾಜ್ಯ ಯಾವುದು ?

20. ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಏಕೆ ?

21. ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಏಕೆ ಕರೆಯಲ್ಪಡುತ್ತದೆ ?

22. ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ?

23. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಹೇಗೆ ಅಳೆಯಲಾಗುತ್ತದೆ ?

24. ನಾಸ್‌ಡಾಕ್ ( NASDAQ ) ನಲ್ಲಿ ನೊಂದಾಯಿಸಲ್ಪಟ್ಟ ಪ್ರಥಮ ತಂತ್ರಜ್ಞಾನ ಸಂಸ್ಥೆ ಯಾವುದು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 25 × 2 = 50

25. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ. ಈ ಹೇಳಿಕೆಯನ್ನು ಸಮರ್ಥಿಸಿ.

26. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳನ್ನು ವಿವರಿಸಿ.

27. ಬ್ರಹ್ಮಸಮಾಜದ ಉದ್ದೇಶಗಳನ್ನು ವಿವರಿಸಿ.

***ಅಥವಾ***

ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು ಯಾವುವು ?

28. ಝಾರ್‌ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯುತ್ತಿದ್ದರು ?

29. ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ.

30. 1857 ರ ದಂಗೆಯ ವಿಫಲತೆಗೆ ಕಾರಣವೇನು ? ವಿವರಿಸಿ.

31. ನಿರಾಶ್ರಿತರ ಸಮಸ್ಯೆಯನ್ನು ಸ್ವತಂತ್ರ ಭಾರತವು ಹೇಗೆ ಎದುರಿಸಿತು ?

32. ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ?

33. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ ?

34. ಭದ್ರತಾ ಸಮಿತಿಯ ಕಾರ್ಯಗಳು ಯಾವುವು ?

35. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳು ಯಾವುವು ?

36. ದೊಂಬಿಯ ಸ್ವರೂಪವನ್ನು ವಿವರಿಸಿ.

37. ಉತ್ತರ ಮೈದಾನವನ್ನು ವಿವರಿಸಿ.

38. ಮಣ್ಣಿನ ಸವೆತಕ್ಕೆ ಕಾರಣಗಳೇನು ?

39. ಅರಣ್ಯನಾಶಕ್ಕೆ ಮುಖ್ಯ ಕಾರಣಗಳೇನು ?

40. ಇತ್ತೀಚಿನ ದಿನಗಳಲ್ಲಿ ಭೌಗೋಳಿಕ ಮಾಹಿತಿ ವ್ಯವಸ್ಥೆಯು ಅತ್ಯಂತ ಉಪಯೋಗಕಾರಿ. ಹೇಗೆ ?

41. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

42. ಭೂ ಬಳಕೆಯ ಪ್ರಕಾರಗಳು ಯಾವುವು ?

43. ಭೂ ಕುಸಿತದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

44. ಕಡಲ ಕೊರೆತವನ್ನು ಹೇಗೆ ನಿಯಂತ್ರಿಸಬಹುದು ?

45. ಜನಸಂಖ್ಯಾ ಸ್ಫೋಟವು ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಹೇಗೆ ?

46. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು ?

47. ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳು ಯಾವುವು ?

48. "ಜಾಗತೀಕರಣವು ವಿಶ್ವದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ." ಈ ಹೇಳಿಕೆಯನ್ನು ಸಮರ್ಥಿಸಿ.

49. ಜೀವ ವಿಮೆ ಮತ್ತು ಸಾಮಾನ್ಯ ವಿಮೆ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸ ಬರೆಯಿರಿ.

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. 1857 ರ ದಂಗೆಗೆ ಆರ್ಥಿಕ ಅಂಶಗಳು ಮುಖ್ಯ ಕಾರಣವಾದವು. ಈ ಹೇಳಿಕೆಯನ್ನು ಸಮರ್ಥಿಸಿ.

**ಅಥವಾ**

ಸಾರಿಗೆ ಸಂಪರ್ಕದಲ್ಲಾದ ಬೆಳವಣಿಗೆಯು ರಾಷ್ಟ್ರೀಯತೆಗೆ ಕಾರಣವಾಯಿತು. ಸಮರ್ಥಿಸಿ.

51. ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳನ್ನು ವಿವರಿಸಿ.

**ಅಥವಾ**

ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

52. ಅಸ್ಪೃಶ್ಯತಾ ನಿವಾರಣೆಗಾಗಿ ಇರುವ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳಾವುವು ?

**ಅಥವಾ**

ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸಗಳೇನು ?

53. ರಸ್ತೆಸಾರಿಗೆಯ ತೊಡಕುಗಳನ್ನು ವಿವರಿಸಿ.

**ಅಥವಾ**

ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದ ಮೇಲೆ ಯಾವ ರೀತಿ ಕ್ರಾಂತಿ ಉಂಟಾಯಿತು ?

54. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ತಿಳಿಸಿ.

**ಅಥವಾ**

ಸಾರ್ವಜನಿಕ ಹಣಕಾಸು ಮತ್ತು ಖಾಸಗಿ ಹಣಕಾಸು ನಡುವಿನ ವ್ಯತ್ಯಾಸ ತಿಳಿಸಿ.

55. ಬ್ಯಾಂಕ್ ಖಾತೆ ತೆರೆಯುವ ವಿವಿಧ ಹಂತಗಳನ್ನು ವಿವರಿಸಿ.

**ಅಥವಾ**

ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ನೆಹರೂರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳೇನು ?

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) $82\frac{1}{2}^{\circ}$ ಪೂರ್ವ ರೇಖಾಂಶ

b) ನರ್ಮದಾ ನದಿ

c) ಬಾಂಬೆಹೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳೇನು ? 4